ನಿಮ್ಮಲ್ಲಿ ಯಾರಾದರೂ ಮಸೀದಿಯನ್ನು ಪ್ರವೇಶಿಸಿದರೆ, ಪ್ರವಾದಿಯವರ ಮೇಲೆ ಸಲಾಂ ಹೇಳಲಿ ಮತ್ತು ಹೀಗೆ ಹೇಳಲಿ: 'ಅಲ್ಲಾಹುಮ್ಮ ಫ್ತಹ್ ಲೀ ಅಬ್ವಾಬ ರಹ್ಮತಿಕ' (ಓ ಅಲ್ಲಾಹ್, ನನಗಾಗಿ ನಿನ್ನ ಕರುಣೆಯ ಬಾಗಿಲುಗಳನ್ನು ತೆರೆ)

ಅಬೂ ಹುರೈರಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಿಮ್ಮಲ್ಲಿ ಯಾರಾದರೂ ಮಸೀದಿಯನ್ನು ಪ್ರವೇಶಿಸಿದರೆ, ಪ್ರವಾದಿಯವರ ಮೇಲೆ ಸಲಾಂ ಹೇಳಲಿ ಮತ್ತು ಹೀಗೆ ಹೇಳಲಿ: 'ಅಲ್ಲಾಹುಮ್ಮ ಫ್ತಹ್ ಲೀ ಅಬ್ವಾಬ ರಹ್ಮತಿಕ' (ಓ ಅಲ್ಲಾಹ್, ನನಗಾಗಿ ನಿನ್ನ ಕರುಣೆಯ ಬಾಗಿಲುಗಳನ್ನು ತೆರೆ). ಮತ್ತು ಅವನು ಹೊರಬರುವಾಗ, ಪ್ರವಾದಿಯವರ ಮೇಲೆ ಸಲಾಂ ಹೇಳಲಿ ಮತ್ತು ಹೀಗೆ ಹೇಳಲಿ: 'ಅಲ್ಲಾಹುಮ್ಮ ಅ'ಅಸಿಮ್ನೀ ಮಿನ ಶ್ಶೈತಾನಿ ರ್ರಜೀಮ್' (ಓ ಅಲ್ಲಾಹ್,
ಶಪಿಸಲ್ಪಟ್ಟ ಶೈತಾನನಿಂದ ನನ್ನನ್ನು ರಕ್ಷಿಸು)." ಅಲ್-ಹಾಕಿಮ್ ರವರ ವರದಿಯಲ್ಲಿ (ಹೀಗಿದೆ): "ಮತ್ತು ಅವನು ಹೊರಬರುವಾಗ, ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ)
ಮೇಲೆ ಸಲಾಂ ಹೇಳಲಿ ಮತ್ತು ಹೀಗೆ ಹೇಳಲಿ: 'ಅಲ್ಲಾಹುಮ್ಮ ಅಜಿರ್ನೀ ಮಿನ ಶ್ಶೈತಾನಿ
ರ್ರಜೀಮ್' (ಓ ಅಲ್ಲಾಹ್, ಶಪಿಸಲ್ಪಟ್ಟ ಶೈತಾನನಿಂದ ನನ್ನನ್ನು ಕಾಪಾಡು)."
[حسن] [رواه ابن ماجه والحاكم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಮುಸ್ಲಿಮನಿಗೆ ಮಾರ್ಗದರ್ಶನ ನೀಡುವುದೇನೆಂದರೆ, ಅವನು ಮಸೀದಿಯನ್ನು ಪ್ರವೇಶಿಸಲು ಬಯಸಿದರೆ, ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಮೇಲೆ "ಅಲ್ಲಾಹುಮ್ಮ ಸಲ್ಲಿ ವಸಲ್ಲಿಮ್ ಅಲಾ ಮುಹಮ್ಮದ್" ಎಂದು ಹೇಳುವ ಮೂಲಕ ಸಲಾಂ ಹೇಳಲಿ. ನಂತರ ಅವನು ಹೀಗೆ ಹೇಳಲಿ: “ಓ ಅಲ್ಲಾಹ್, ನನಗಾಗಿ ನಿನ್ನ ಕರುಣೆಯ ಬಾಗಿಲುಗಳನ್ನು ತೆರೆ”. ಅವನು (ಮಸೀದಿಯಿಂದ) ಹೊರಬರುವಾಗ ಪ್ರವಾದಿಯವರ ಮೇಲೆ ಸಲಾಂ ಹೇಳಲಿ ಮತ್ತು ಹೀಗೆ ಹೇಳಲಿ: (ಓ ಅಲ್ಲಾಹ್, ಶಪಿಸಲ್ಪಟ್ಟ ಶೈತಾನನಿಂದ ನನ್ನನ್ನು ರಕ್ಷಿಸು). ಅಲ್-ಹಾಕಿಮ್ ಅವರ ವರದಿಯಲ್ಲಿ: ಅವನು ಹೀಗೆ ಹೇಳಲಿ: (ಓ ಅಲ್ಲಾಹ್, ಶಪಿಸಲ್ಪಟ್ಟ ಶೈತಾನನಿಂದ ನನ್ನನ್ನು ಕಾಪಾಡು.

http://sunnah.global/hadeeth/kn/show/65418